(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ಅಸಲು ದಾವೆ ನಂ.272/2015

**ದಿನಾಂಕಃ 18-02-2025, ಡಿ ಡಬ್ಲ್ಯೂ-1**

**ಪಾಟೀ ಸವಾಲುಃ ಶ್ರೀ ಬಿ ಸಿ ಆರ್ ವಕೀಲರಿಂದಃ**

ನನ್ನ ತಂದೆಯನ್ನು ಮೊಗಪ್ಪ ಮತ್ತು ಈರಯ್ಯ ಎಂಬ ಹೆಸರುಗಳಿಂದ ಕರೆಯುತ್ತಾರೆ ಎಂದರೆ ಸಾಕ್ಷಿಯು ಈರಯ್ಯ ಎಂದು ಮಾತ್ರ ಕರೆಯುತ್ತಾರೆ ಎಂದು ನುಡಿಯುತ್ತಾರೆ. ನನ್ನ ಹೆಸರನ್ನು ಊರಿನಲ್ಲಿ ಗವಿ ಮತ್ತು ರಂಗಸ್ವಾಮಿ ಎಂಬ ಹೆಸರುಗಳಿಂದ ಕರೆಯುತ್ತಾರೆ ಎಂದರೆ ಸಾಕ್ಷಿಯು ರಂಗಸ್ವಾಮಿ ಎಂದು ಮಾತ್ರ ಕರೆಯುತ್ತಾರೆ ಎಂದು ನುಡಿಯುತ್ತಾರೆ.

ಈ ದಾವೆಯನ್ನು ವಾದಿ ಏಕೆ ಹೂಡಿದ್ದಾರೆ ಎಂದು ನನಗೆ ಗೊತ್ತು. ಸಾಕ್ಷಿಯು ಮುಂದುವರೆದು ನಾವು ಕ್ರಯ ಪತ್ರದ ಪ್ರಕಾರ 19 ಗುಂಟೆ ಜಾಗದ ಸ್ವಾಧೀನದಲ್ಲಿದ್ದು, ವಾದಿ ನಮ್ಮ ಸ್ವಾಧೀನಕ್ಕೆ ತಂಟೆಯನ್ನು ಮಾಡುತ್ತಾ ನಿರ್ಬಂದಕಾಜ್ಞೆ ಕೋರಿ ದಾವೆ ಹೂಡಿದ್ದಾರೆ. 19 ಗುಂಟೆ ಜಮೀನನ್ನು ವಾದಿ ಈರಯ್ಯನ ಹೆಂಡತಿ ಜಯಮ್ಮ ರವರಿಗೆ ದಿಃ 29-05-1995 ರಲ್ಲಿ ಬರೆದುಕೊಟ್ಟಿದ್ದರು. ಸದರಿ ಕ್ರಯ ಪತ್ರವನ್ನು ತಲ್ಲೂಕು ಕಚೇರಿಯ ಮುಂಭಾಗದಲ್ಲಿ ಬರೆದುಕೊಟ್ಟಿದ್ದಾರೆ. ಸದರಿ ಕ್ರಯ ಪತ್ರ ನೊಂದಾಣಿ ಆಗಿಲ್ಲ.

ಹಾಗೂ ಖಾತಾ ಬದಲಾವಣೆ ಆಗಿಲ್ಲ. 19 ಗುಂಟೆ ಜಮೀನು ನನ್ನ ತಾಯಿಗೆ ಬರೆದುಕೊಡುವ ಮೊದಲು ಯಾವ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. 19 ಗುಂಟೆ ಜಮೀನಿನ ಸರ್ವೆ ನಂ. 130/3. ಸರ್ವೆ ನಂ.130/3 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ, ಆದರೆ 1 ಎಕರೆ 17 ಗುಂಟೆ ಜಮೀನಿನ ಪೈಕಿ 19 ಗುಂಟೆ ಜಮೀನು ಕ್ರಯ ಆಗಿದೆ. ಸದರಿ ಕ್ರಯ ಆಗಿರುವ ವಿಚಾರ ನನಗೆ ಗೊತ್ತು.

ನಾನು ಎಂ ಎ ಪದವೀಧರ. ನನ್ನ ತಾಯಿಗೆ ಆದ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಕ್ರಯ ಪತ್ರದ ದಿನಾಂಕದಿಂದ ನಾವು 19 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದೇವೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಕ್ರಯ ಪತ್ರವನ್ನು ವಾದಿ ಮತ್ತು ಬೊಮ್ಮಯ್ಯ ಎಂಬುವವರು ನನ್ನ ತಾಯಿಗೆ ಬರೆದುಕೊಟ್ಟಿದ್ದಾರೆ, ಬೊಮ್ಮಯ್ಯ ವಾದಿಯ ಸಹೋದರ.

ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ, ಆದರೆ 19 ಗುಂಟೆ ಜಮೀನಿಗೆ ಚೆಕ್ಕುಬಂದಿ ಗೊತ್ತು. ನಿಪಿ-1 ನ್ನು ಕೃಷ್ಣ ಮತ್ತು ಬೊಮ್ಮಯ್ಯ ರವರು ವಾದಿಗೆ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ನ್ನು 1998 ರಲ್ಲಿ ಬರೆದುಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರ ಪ್ರಕಾರ ದಾವಾ ಆಸ್ತಿ ವಾದಿಯ ಹೆಸರಿಗೆ ಖಾತಾ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ರ ಕಾಲಂ 1 ರಲ್ಲಿ ಸರ್ವೆ ನಂ.130/3 , ಕಾಲಂ ನಂ.9 ರಲ್ಲಿ

ಅಣ್ಣಯ್ಯ ಬಿನ್ ಹುಚ್ಚಯ್ಯ 1 ಎಕರೆ 17 ಗುಂಟೆ ಎಂದು ನಮೂದು ಇದೆ. ನಿಪಿ–5 ರಲ್ಲಿ ವಾದಿಯ ಹೆಸರು ಮತ್ತು ಸರ್ವೆ ನಂಬರ್ ಇದೆ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ.ಸ. ಇದೆ.

(**ರಘು ಎಂ.**)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ**
**ಅರಕಲಗೂಡು.**

®